153 ಹಿ.ಪ ನಿ:72 = (126)
4RR
0707

**ವಿಧಾನ ಪರಿಷತ್ತು ಸದಸ್ಯರಾದ ಮಾನ್ಯ ಶ್ರೀ ಶಶೀಲ್.ಜಿ.ನಮೋಶಿ ರವರಿಂದ ನಿಯಮ 72 ರ ಅಡಿಯಲ್ಲಿ ನೀಡಿರುವ ಗಮನಸೆಳೆಯುವ ಸೂಚನೆ ಉತ್ತರಿಸುವ ಬಗ್ಗೆ.**

**ಸೂಚನೆ :-**

ರಾಯಚೂರು ಜಿಲ್ಲೆ ಸಿರವಾರ ತಾಲ್ಲೂಕು ಅತ್ತುನೂರು ಗ್ರಾಮಕ್ಕೆ ಕುಡಿಯುವ ನೀರಿನ ಸೌಲಭ್ಯ ಒದಗಿಸಲು "ಬಹುಗ್ರಾಮ ಕುಡಿಯುವ ನೀರು ಯೋಜನೆ" ಕಾಮಗಾರಿ ನೆನೆಗುದಿಗೆ ಬಿದ್ದು, ಸದರಿ ಗ್ರಾಮಕ್ಕೆ ತೀವ್ರವಾಗಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದು, ಸದರಿ ಕಾಮಗಾರಿಗೆ ಮೀಸಲಿಟ್ಟ ಹಣ ಸದುಪಯೋಗ, ಮತ್ತು ಕಾಮಗಾರಿ (ಮನೆ ಮನೆಗೆ ನಲ್ಲಿ ಮುಖಾಂತರ ಕುಡಿಯುವ ನೀರು ಸಂಪರ್ಕ) ನಿಗದಿತ ಸಮಯದಲ್ಲಿ ಜಾರಿಗೊಳ್ಳದಿರುವ ಕುರಿತು ಕೂಡಲೇ ಗಂಭೀರವಾಗಿ ಪರಿಗಣಿಸಿ, ಸದರಿ ಗ್ರಾಮಕ್ಕೆ ಕುಡಿಯುವ ನೀರಿನ ಸಮಸ್ಯೆ ನೀಗಿಸಲು ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಗಮನ ಸೆಳೆಯ ಬಯಸುತ್ತೇನೆ.

********

**ಹೇಳಿಕೆ:-**

ರಾಯಚೂರು ಜಿಲ್ಲೆಯ ಸಿರವಾರ ತಾಲ್ಲೂಕಿನ ಅತ್ತನೂರು ಗ್ರಾಮಕ್ಕೆ ಕುಡಿಯುವ ನೀರನ್ನು, ಅತ್ತನೂರು ಹಾಗೂ ಇತರೆ 7 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯು 2008-09 ರಲ್ಲಿ ಮಂಜೂರಾಗಿದ್ದು, ಸದರಿ ಯೋಜನೆಯೊಂದಿಗೆ ಕಲ್ಲೂರು ಹಾಗೂ ಇತರೆ 10 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಇನ್ನೊಂದು ಯೋಜನೆಯನ್ನು ಕ್ರೂಢೀಕರಿಸಿ ಒಟ್ಟು ಅಂದಾಜು ಮೊತ್ತ ರೂ. 760.00 ಲಕ್ಷಗಳ ಟೆಂಡರನ್ನು ಶ್ರೀ. ಅಮರಖೇಡ್ ಎಸ್. ಎಮ್. ಗುತ್ತಿಗೆದಾರರಿಗೆ ದಿನಾಂಕ: 02.02.2009 ರಂದು ವಹಿಸಲಾಗಿತ್ತು.

ಈ ಯೋಜನೆಯು ಅಂದಾಜು ಪಟ್ಟಿಯಲ್ಲಿ 2 Impounding Reservoir ನಿರ್ಮಾಣ ಮಾಡಲು ಉದ್ದೇಶಿಸಿದ್ದು ಒಂದನ್ನು ಅತ್ತನೂರು ಗ್ರಾಮದ ಹತ್ತಿರ ಇರುವ ಸರ್ಕಾರಿ ಜಮೀನಿನಲ್ಲಿ ನಿರ್ಮಾಣ ಮಾಡಿ ಅಲ್ಲಿಂದ 9 ಗ್ರಾಮಗಳಿಗೆ ಶುದ್ದ ಕುಡಿಯುವ ನೀರು ಸರಬರಾಜು ಮಾಡುವುದು ಹಾಗೂ ಇನ್ನೊಂದನ್ನು ಕಲ್ಲೂರು ಗ್ರಾಮದಲ್ಲಿ ನಿರ್ಮಾಣ ಮಾಡಿ 2 ಗ್ರಾಮಗಳಿಗೆ ನೀರು ಸರಬರಾಜು ಮಾಡಲು ಉದ್ದೇಶಿಸಲಾಗಿತ್ತು.

ಸದರಿ ಕಾಮಗಾರಿಗೆ ಅತ್ತನೂರು ಗ್ರಾಮದ ಹತ್ತಿರ Impounding Reservoir ನಿರ್ಮಿಸಲು ಯೋಜಿಸಿದ ಸರ್ಕಾರಿ ಜಮೀನಿನ ಮಣ್ಣು ತಾಂತ್ರಿಕವಾಗಿ ಸೂಕ್ತ ರೀತಿಯಲ್ಲಿ ಇಲ್ಲದಿರುವುದರಿಂದ ಸ್ಥಳ ಬದಲಾಯಿಸಿ ತುಂಗಭದ್ರ ಕಾಲುವೆಯ ಗಣೇಕಲ್ ಬ್ಯಾರೇಜ್ ಕೆಳ ಭಾಗದಲ್ಲಿ ಇದ್ದ ಒಟ್ಟು 17 ಎಕರೆ 17 ಗುಂಟೆ ವಿಸ್ತೀರ್ಣದ ಖಾಸಗಿ ಜಮೀನಿನಲ್ಲಿ Impounding Reservoir ನಿರ್ಮಾಣ ಮಾಡಲು ಯೋಜಿಸಿ ಸದರಿ ಜಮೀನನ್ನು ಸರ್ಕಾರದ ಹೆಸರಿನಲ್ಲಿ ದಿನಾಂಕ:-09-02-2018 ರಂದು ನೊಂದಣಿ ಮಾಡಿಕೊಳ್ಳಲಾಗಿರುತ್ತದೆ.

ಆದರೆ ಕಾಮಗಾರಿಯು ವಿಳಂಬವಾಗಿರುವುದರಿಂದ ಗುತ್ತಿಗೆದಾರರು ಯಾವುದೇ ಪ್ರಕ್ರಿಯೆ ತೋರಿಸಿಲ್ಲವಾದ್ದರಿಂದ ಸದರಿ ಯೋಜನೆಯ ಗುತ್ತಿಗೆದಾರರಿಗೆ ಹಲವಾರು ಬಾರಿ ಕಾಮಗಾರಿಯನ್ನು ಪ್ರಾರಂಭಿಸಲು ಸೂಚಿಸಿದರೂ ಕಾಮಗಾರಿಯನ್ನು ಪುನಃ ಪ್ರಾರಂಭಿಸಿರುವುದಿಲ್ಲಾ, ಹಾಗೂ ಅಂತಿಮ ನೋಟಿಸ್ ನೀಡಿದರೂ ಸಹ ಕಾಮಗಾರಿ ಪ್ರಾರಂಭಿಸದೇ ಇರುವುದರಿಂದ ಅಂತಿಮ ಅಳತೆಗಳನ್ನು ತೆಗೆದುಕೊಂಡು ಪಂಚನಾಮ ಮಾಡಿ Risk & Cost ಆಧಾರದ ಮೇಲೆ ಕರಾರು ಒಪ್ಪಂದವನ್ನು ದಿನಾಂಕ : 26.02.2020 ರಂದು ಟೆಂಡರ್ ನಿಯಮಾನುಸಾರ ರದ್ದುಗೊಳಿಸಿ ಹಾಗೂ ಗುತ್ತಿಗೆದಾರರ

ಪರವಾನಿಗೆಯನ್ನು ಕಪ್ಪು ಪಟ್ಟಿಗೆ ಸೇರಿಸಲು ಶಿಫಾರಸ್ಸು ಮಾಡಿ ಭದ್ರತಾ ಠೇವಣಿ ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ.

ಮುಂದುವರೆದು, ರಾಯಚೂರು ಜಿಲ್ಲೆ ಸಿರವಾರ ತಾಲ್ಲೂಕಿನ ಅತನೂರು ಗ್ರಾಮಕ್ಕೆ ಕುಡಿಯುವ ನೀರು ಒದಗಿಸಲು ಜಲ ಜೀವನ ಮಿಷನ್ ಯೋಜನೆ ಅಡಿ ಹಂತ-1ರಲ್ಲಿ ಕಾಮಗಾರಿ ಕೈಗೊಂಡಿದ್ದು, ಪ್ರಗತಿಯಲ್ಲಿರುವ ಕಾಮಗಾರಿಯನ್ನು ಪೂರ್ಣಗೊಳಿಸಿ, ಕುಡಿಯುವ ನೀರು ಸರಬರಾಜು ಮಾಡಲು ಯೋಜಿಸಿದೆ. ಅತ್ತನೂರು ಹಾಗೂ 7 ಗ್ರಾಮಗಳು ಒಳಗೊಂಡಂತೆ ರಾಯಚೂರು ಜಿಲ್ಲೆಯ ಎಲ್ಲಾ ಗ್ರಾಮೀಣ ಜನವಸತಿಗಳಿಗೆ ಈಗಾಗಲೇ ಅನುಮೋದನೆಯಾದ MVS DBOT ಬಹುಗ್ರಾಮ ಕುಡಿಯುವ ನೀರು ಯೋಜನೆ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿರುತ್ತದೆ ಹಾಗೂ ಸದರಿ ಯೋಜನೆಯು ಪ್ರಸ್ತುತ ಪ್ರಗತಿಯಲ್ಲಿರುತ್ತದೆ. ಜಲ ಜೀವನ ಮಿಷನ್ ಯೋಜನೆ ಅಡಿ ಸದರಿ ಗ್ರಾಮದಲ್ಲಿನ ಎಲ್ಲಾ ಒಟ್ಟು ಮನೆಗಳಿಗೆ ನಳ ಸಂಪರ್ಕ ಕಲ್ಪಿಸಲು ಕಾಮಗಾರಿ ಸಹ ಪ್ರಗತಿಯಲ್ಲಿರುತ್ತದೆ.

ಗ್ರಾಮಕ್ಕೆ ಜಲ ಜೀವನ ಮಿಷನ್ ಯೋಜನೆ ಅಡಿ ಹಂತ-1 ರಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಜಲಜೀವನ್ ಮಿಷನ್ ಯೋಜನೆಯನ್ನು ಮಾರ್ಚ್ 2024ರೊಳಗೆ ಪೂರ್ಣಗೊಳಿಸಬೇಕಾಗಿದ್ದು, ಈ ಕಾಮಗಾರಿಯು ಶೇ.70ರಷ್ಟು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಯನ್ನು ಕೂಡಲೇ ಪೂರ್ಣಗೊಳಿಸಲು ಯೋಜಿಸಲಾಗಿದೆ. ಗ್ರಾಮೀಣ ಜನವಸತಿ ಪ್ರದೇಶಕ್ಕೆ ಜಲ ಜೀವನ್ ಮಿಷನ್ ಯೋಜನೆಯಡಿಯಲ್ಲಿ ಪ್ರತಿ ಮನೆಗಳಿಗೆ ಒಂದು ನಳ ಸಂಪರ್ಕದಂತೆ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಯು ಪೂರ್ಣಗೊಳಿಸಿ ಯೋಜನೆಯನ್ನು ಯಶಸ್ವಿಗೊಳಿಸಲಾಗುವುದು. ಸದರಿ ಗ್ರಾಮಕ್ಕೆ ಜಲ ಜೀವನ ಮಿಷನ್ ಯೋಜನೆ ಅಡಿ ಕಾಮಗಾರಿಯ ಅನುಮೋದಿತ ಮೊತ್ತ ರೂ.115.00 ಲಕ್ಷಗಳಲ್ಲಿ ರೂ.65.86 ಲಕ್ಷಗಳು ವೆಚ್ಚವಾಗಿ ಹಣ ಸದುಪಯೋಗವಾಗಿರುತ್ತದೆ.

**(ಪ್ರಿಯಾಂಕ್ ಖರ್ಗೆ)**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್**
**ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ**
**ತಂತ್ರಜ್ಞಾನ ಸಚಿವರು**

ಸಂ: ಗ್ರಾಕುನೀ&ನೈಇ/ಮುಇಂ/ತಾಂತ್ರಿಕ/85/2024-25